## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಪಿಡಬ್ಲ್ಯೂ:10

ಎಸ್.ಸಿ. ಸಂಖ್ಯೆ: 10/2019 ಸಿಡಬ್ಲ್ಯೂ:7

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ನಟರಾಜ ನಾಯಕ್ |
| **ತಂದೆ ಹೆಸರು** | ಃ | ಸುಭಾಷ್ ನಾಯಕ್ |
| **ವಯಸ್ಸು** | ಃ | 31 ವರ್ಷ |
| **ವೃತ್ತಿ** | ಃ | ಡ್ರೈವರ್ |
| **ವಾಸ** | ಃ | ಜಡ್ಕಲ್, ಕುಂದಾಪುರ |

**<u>ದಿನಾಂಕಃ 17-09-2021</u> ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆ</u> ಃ <u>ಸರ್ಕಾರಿ ಅಭಿಯೋಜಕರಿಂದ</u>**

2019 ರಲ್ಲಿ ನಾನು ಧಾರವಾಡದಲ್ಲಿ ಕರಾವಳಿ ಫಿಶ್ ಲ್ಯಾಂಡ್‌ನಲ್ಲಿ ಕೆಲಸ ಮಾಡುತ್ತಿದ್ದೆನು. ಈ ಹೊಟೇಲ್ ನನ್ನ ತಾಯಿಯದ್ದು ಇರುತ್ತದೆ. ನ್ಯಾಯಾಲಯದಲ್ಲಿರುವ ಆರೋಪಿ ನನ್ನ ಅಣ್ಣ ಇರುತ್ತಾನೆ. 2019 ರ ಮಾರ್ಚ ತಿಂಗಳಲ್ಲಿ ಕುಂದಾಪುರ ಪೊಲೀಸ್ ಠಾಣೆಯಿಂದ ನನಗೆ ಫೋನ್ ಬಂದಿದ್ದು ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಮರುದಿನ ಬೆಳಿಗ್ಗೆ ನಾನು ಠಾಣೆಗೆ ಹೋಗಿರುತ್ತೇನೆ. ಆಗ ಅಲ್ಲಿ ಆರೋಪಿ ಇದ್ದನು. ಅಲ್ಲಿ ಪೊಲೀಸರು ಆರೋಪಿ ಕೊಲೆ ಮಾಡಿದ್ದಾನೆ ಎಂದು ನನಗೆ ತಿಳಿಸಿರುತ್ತಾರೆ. ಕೊಲೆಗೆ ಸಂಬಂಧಿಸಿದಂತೆ ಆರೋಪಿ ನನಗೆ ಏನನ್ನೂ ತಿಳಿಸಿಲ್ಲ. ಪೊಲೀಸರು ನನಗೆ ಹೇಳಿಕೊಟ್ಟ ಹಾಗೆ ನಾನು ಅವರ ಮುಂದೆ ಹಾಗೂ ನ್ಯಾಯಾಧೀಶರ ಮುಂದೆ ಹೇಳಿದ್ದೇನೆ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

**ಎಸ್.ಸಿ. ಸಂಖ್ಯೆಃ 10/2019**
**ಪಿಡಬ್ಲ್ಯೂಃ10**
**ಸಿಡಬ್ಲ್ಯೂಃ7**

**<u>ಪಾಟೀ ಸವಾಲುಃ</u> ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 01-03-2019 ರಂದು ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ಧಾರವಾಡಕ್ಕೆ ಆರೋಪಿ ನಾವು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಬಂದಿರುವುದಿಲ್ಲ. ಆರೋಪಿ ನನಗೆ ಫೋನ್ ಮಾಡಿ ತಾನು ಕಟ್‌ಬೆಳ್ತೂರು, ಹರೆಗೋಡು, ಸುಳ್ಸೆಯಲ್ಲಿ ಗುಲಾಬಿ ಎನ್ನುವವರನ್ನು ಟವಲ್ ನಿಂದ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಸಾಯಿಸಿ ಅವಳ ಹತ್ತಿರ ಇದ್ದ ಚಿನ್ನದ ಸರ, ಬೆಂಡೋಲೆ, ಉಂಗುರವನ್ನು ತೆಗೆದುಕೊಂಡು ಬಂದಿರುವುದಾಗಿ ಹೇಳಿದ್ದಾನೆ ಎಂದು ಸೂಚಿಸುವುದು ಸರಿ ಅಲ್ಲ. ಆರೋಪಿ ತಾನು ರಂಜಿತ್ ಈತನ ಹತ್ತಿರ ಪಡೆದುಕೊಂಡ ಸಾಲದ ಹಣ ತೀರಿಸುವುದಕ್ಕಾಗಿ ಚಿನ್ನದ ಸರ, ಬೆಂಡೋಲೆ, ಉಂಗುರವನ್ನು ಅವನಿಗೆ ಬ್ಯಾಂಕ್‌ನಲ್ಲಿ ಅಡ ಇಟ್ಟು ತೆಗೆದುಕೊಳ್ಳುವಂತೆ ತಿಳಿಸಿರುವುದಾಗಿ ನನ್ನ ಮುಂದೆ ಹೇಳಿದ್ದಾನೆ ಎನ್ನುವುದು ಸರಿ ಅಲ್ಲ. ರಂಜಿತ್ ಇವನಿಗೆ ಕೊಡಬೇಕಾದ ಹಣ ಕೊಟ್ಟು ಉಳಿದ ರೂ.14,000/- ತಾನು ತೆಗೆದುಕೊಂಡು ಬಂದಿರುವುದಾಗಿ ಹೇಳಿದ್ದಾನೆ ಎನ್ನುವುದು ಸರಿ ಅಲ್ಲ. ಆರೋಪಿ ಆ ರೂ.14,000/- ಗಳನ್ನು ತನ್ನ ಪ್ಯಾಕೆಟ್‌ನಿಂದ ತೆಗೆದು ತೋರಿಸುವಾಗ ಪ್ಯಾಕೆಟ್‌ನಲ್ಲಿ ಒಂದು ಕಿವಿ ಓಲೆ ಹಾಗೂ ಒಂದು ಉಂಗುರವನ್ನು ನಾನು ನೋಡಿದ್ದೇನೆ ಎನ್ನುವುದು ಸರಿ ಅಲ್ಲ. ಮೇಲೆ ಹೇಳಿದಂತೆ ಆರೋಪಿ ನನಗೆ ಹೇಳಿದ್ದು ಇದೇ ರೀತಿ ನಾನು ಪೊಲೀಸರ ಹಾಗೂ ನ್ಯಾಯಾಧೀಶರ ಮುಂದೆ ಹೇಳಿದ್ದೇನೆ ಎಂದರೆ ಕೇವಲ ನ್ಯಾಯಾಧೀಶರ ಮುಂದೆ ಹೇಳಿರುತ್ತೇನೆ. ಪೊಲೀಸರು ದಾಖಲಿಸಿಕೊಂಡ ಸಾಕ್ಷಿಯ ಈ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ಈಗ ನೋಡಿದ ಹೇಳಿಕೆಯಲ್ಲಿರುವ ಸಹಿ ನನ್ನದು ಇದೆ. ಸಾಕ್ಷಿ ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯನ್ನು ನಿಪಿ-17 ಎಂದು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ನನ್ನ ಹೇಳಿಕೆಯನ್ನು ನ್ಯಾಯಾಧೀಶರು ತಮ್ಮ ಕಚೇರಿಯಲ್ಲಿ ದಾಖಲಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನ್ಯಾಯಾಧೀಶರು ಹಾಗೂ ನ್ಯಾಯಾಲಯದ ಸಿಬ್ಬಂದಿ ಮಾತ್ರ ಇದ್ದರು. ಹೇಳಿಕೆ ದಾಖಲಿಸಿಕೊಳ್ಳುವ ಮೊದಲು ನ್ಯಾಯಾಧೀಶರು ನನ್ನೊಂದಿಗೆ ಮಾತನಾಡಿದ್ದಾರೆ ಎನ್ನುವುದು ನಿಜ. ಆ ಸಮಯದಲ್ಲಿ ಸ್ವಇಚ್ಛೆಯಿಂದ ಮತ್ತು ಯಾವುದೇ ಒತ್ತಡ ಇಲ್ಲದೇ ಹೇಳಿಕೆ

ನೀಡಬೇಕು ಎಂದು ಅವರು ತಿಳಿಸಿದ್ದಾರೆ ಎನ್ನುವುದು ನಿಜ. ಅದೇ ರೀತಿ ನಾನು ಸ್ವಇಚ್ಛೆಯಿಂದ ಹೇಳಿಕೆ ನೀಡಿದ್ದೇನೆ. ಆರೋಪಿ ತಾನು ಮಾಡಿದ ಕೃತ್ಯದ ಬಗ್ಗೆ ನನ್ನ ಹತ್ತಿರ ಹೇಳಿಕೊಂಡಿದ್ದರೂ ಸಹಿತ ನಾನು ಅವನಿಗೆ ಸಹಾಯ ಮಾಡುವ ಸಲುವಾಗಿ ಈಗ ಆ ರೀತಿಯಲ್ಲಿ ನನ್ನ ಹತ್ತಿರ ಆರೋಪಿ ಹೇಳಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಆರೋಪಿಯ ಮನೆ ಇರುವುದು ಕಟ್‌ಬೆಳ್ತೂರು, ಹರೆಗೋಡು, ಸುಳ್ಸೆಯಲ್ಲಿಯ ಗೇರುಬೀಜ ಫ್ಯಾಕ್ಟರಿಯ ಪಕ್ಕ. ನಾನು ಅಪರೂಪಕ್ಕೊಮ್ಮೆ ಆರೋಪಿಯ ಮನೆಗೆ ಹೋಗುತ್ತೇನೆ. ಮೃತ ಗುಲಾಬಿ ಇವಳು ಫ್ಯಾಕ್ಟರಿ ಪಕ್ಕ ಒಬ್ಬಳೇ ವಾಸವಾಗಿದ್ದಳು ಎಂದರೆ ಅದು ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು:</u> ಆರೋಪಿ ಪರ ಶ್ರೀ ಎಂ.ಎಸ್.ಎಸ್. ವಕೀಲರಿಂದ**

ಹೊಟೇಲ್‌ನಲ್ಲಿ ನಾನು, ನನ್ನ ತಾಯಿ ಹಾಗೂ ಕೆಲಸದವರು ಇರುತ್ತೇವೆ. ನಾನು ಅನೇಕ ಬಾರಿ ಕುಂದಾಪುರಕ್ಕೆ ಬಂದು ಹೋಗುತ್ತಿರುತ್ತೇನೆ. ಪೊಲೀಸರು ನನ್ನನ್ನು ಠಾಣೆಗೆ ಬರುವಂತೆ ಕರೆಯುವ ಮೊದಲು ಹಾಗೂ ನಂತರ ಬಂದಿರುತ್ತೇನೆ. ಪೊಲೀಸರು ನನ್ನನ್ನು ಠಾಣೆಗೆ ಬರುವಂತೆ ಕರೆಯುವ ಎಷ್ಟು ಸಮಯದ ಮೊದಲು ಕುಂದಾಪುರಕ್ಕೆ ಬಂದಿದ್ದೆ ಎಂದು ನನಗೆ ನೆನಪಿಲ್ಲ.

ನಾನು ಪೊಲೀಸ್ ಠಾಣೆಗೆ ಬಂದ ಮೇಲೆ 2 ದಿನ ಅಲ್ಲಿ ಇದ್ದೆನು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನಗೆ ಇದೇ ರೀತಿ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನೀಡಬೇಕು ಎಂದು ಹೇಳಿರುತ್ತಾರೆ ಎನ್ನುವುದು ನಿಜ. ನನ್ನನ್ನು ಒಬ್ಬ ಪೊಲೀಸ್ ಮಾತ್ರ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದಾನೆ. ಪೊಲೀಸರು ಹೇಳಿದಂತೆ ಹೇಳಿಕೆ ನೀಡದಿದ್ದರೆ ನನ್ನ ಮೇಲೆ ಕೇಸ್ ಮಾಡುತ್ತೇವೆ ಎಂದು ಹೇಳಿದ್ದಾರೆ ಎನ್ನುವುದು ನಿಜ. ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದನ್ನು ಮನದಟ್ಟು ಮಾಡಿಕೊಂಡ ನಂತರ ಪೊಲೀಸರು ನನ್ನನ್ನು ಠಾಣೆಯಿಂದ ಕಳುಹಿಸಿರುತ್ತಾರೆ. ನ್ಯಾಯಾಧೀಶರ ಮುಂದೆ ಹೇಳುವಾಗ ಪೊಲೀಸರು ನನಗೆ ಏನನ್ನಾದರೂ

**ಎಸ್.ಸಿ. ಸಂಖ್ಯೆ: 10/2019**
**ಪಿಡಬ್ಲ್ಯೂ:10**
**ಸಿಡಬ್ಲ್ಯೂ:7**

ಮಾಡುತ್ತಾರೆ ಎನ್ನುವ ಹಿನ್ನಲೆಯಲ್ಲಿ ನನಗೆ ಯಾವುದೇ ಒತ್ತಡ ಇಲ್ಲ ಸ್ವತಂತ್ರವಾಗಿ ಹೇಳುತ್ತೇನೆ ಎಂದು ತಿಳಿಸಿರುತ್ತೇನೆ ಎನ್ನುವುದದು ನಿಜ. ನಾನು ಉದ್ದೇಶಪೂರ್ವಕವಾಗಿ ಮನಃಪೂರ್ವಕವಾಗಿಯಾಗಲಿ ನ್ಯಾಯಾಧೀಶರಿಗೆ ಹೇಳಿಕೆ ನೀಡಿಲ್ಲ ಎನ್ನುವುದು ನಿಜ.

**ಮರು ವಿಚಾರಣೆ:** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.**
**ಕುಂದಾಪುರ**